ಗದ್ಯ ಬರಹಗಾರ. ಅದಕ್ಕೆ ಅವರೂ ಸ್ವಲ್ಪಮಟ್ಟಿಗೆ ಕಾರಣ. ತಮ್ಮ ಬರವಣಿಗೆಯನ್ನು ಆಮೇಲೆ ನೀರುನೀರುಗೊಳಿಸಿ, ನಗೆಹನಿ ಮಟ್ಟಕ್ಕೆ ತಂದರು. ಬರವಣಿಗೆಯ ಮೇಲೇ ಬದುಕಬೇಕಾಗಿದ್ದರಿಂದ ಅದು ಅನಿವಾರ್ಯವೂ ಆಗಿತ್ತು.

◆ ನಿಮ್ಮ ಒಟ್ಟು ಚಿಂತನೆಯಲ್ಲಿ ಸಮಾಜದಲ್ಲಿರೋ ಹಿಂಸೆಯನ್ನು ಕುರಿತ ಚರ್ಚೆಯೇ ಹೆಚ್ಚಾಗಿದೆ.

ಅದನ್ನು ಬಿಟ್ಟು ಬೇರೆ ಏನು ಯೋಚನೆ ಮಾಡೋಕೆ ಸಾಧ್ಯಾ ಇದೆ? ಮಹಾಯುದ್ಧಗಳ ಹಿಂಸೆ ಏನು ಕಡಿಮೇನಾ? ಆಟಂಬಾಂಬಿನ ಸ್ಫೋಟದ ವೈಲನ್ಸ್ ಕಡಿಮೇನಾ? ಚೋಮಸ್ಕಿ ಪ್ರಕಾರ, ವಿಯೆಟ್ನಾಂ ಒಂದು ಯುದ್ಧದಲ್ಲಿ 20 ಲಕ್ಷ ಜನ ವಿಯೆಟ್ನಾಮಿನ ನಾಗರಿಕರು ಸತ್ತರು; 66 ಸಾವಿರ ಅಮೆರಿಕದ ಸೈನಿಕರು ಸತ್ತರು. ಕಳೆದ ಎರಡು ಶತಮಾನದಲ್ಲಿ ವಸಾಹತುಶಾಹಿಗಳು ಸಾಮ್ರಾಜ್ಯಶಾಹಿಗಳು ಎಷ್ಟು ಜನರನ್ನ ಕೊಂದಿದಾರೆ ಎಂದು ಹೆಣಗಳ ಲೆಕ್ಕ ತೆಗೀಬೇಕು. ಹಿಂಸೆಯ ಬಗ್ಗೆ ನಮ್ಮ ಲೆಕ್ಕಾಚಾರದಲ್ಲಿ ಇದೆಲ್ಲ ಬರೋದಿಲ್ಲ. ಬರೇ ಸುಭಾಷಿತಗಳ ಮಟ್ಟದಲ್ಲೇ ನಿಂತುಬಿಡ್ತದೆ – 'ನಾನು ಅಹಿಂಸೆಯ ಪರ. ಹಿಂಸೆಯ ವಿರೋಧಿ' ಅಂತ. ಅಷ್ಟು ಸುಲಭಾನ ಹೇಳೋದು?

◆ ಹಿಂಸೆಯ ಹಲವು ಮಾದರಿಗಳಿವೆ. ಅವನ್ನೆಲ್ಲ ಒಂದೇ ಚೌಕಟ್ಟಿನಲ್ಲಿ ನಿಲ್ಲಿಸಬಹುದಾ?

ನಿಲ್ಲಿಸಬಹುದು. ಇದು ನನ್ನ ವಾದವಲ್ಲ. ಅಶೀಶ್ ನಂದಿಯವರ ವಿವರಣೆ. ಕಳೆದ 200 ವರ್ಷಗಳಲ್ಲಿ ಮನುಷ್ಯನನ್ನು ಇನ್ನೊಂದು ಸ್ವರ್ಗಕಟ್ಟುವ ರಾಜ್ಯಕ್ಕೆ ಒಯ್ಯುತ್ತೇನೆ ಎಂದು ಭರವಸೆ ಕೊಡುವ ಸಿದ್ಧಾಂತಗಳು – ಅದು ರಾಷ್ಟ್ರೀಯವಾದ ಇರಬಹುದು, ಫ್ಯಾಸಿಸಂ ಇರಬಹುದು, ಕಮ್ಯುನಿಸಂ ಇರಬಹುದು, ಇಂಪೀರಿಯಲಿಸಂ ಇರಬಹುದು, ಕಲೊನಿಯಲಿಸಂ ಇರಬಹುದು – ಈ ಇಸಂಗಳು ಸೃಷ್ಟಿಮಾಡಿದ ಹಿಂಸೆ ಕಡಿಮೇನಾ? ಇದಕ್ಕೆ ಹೋಲಿಸಿದರೆ, ಹಿಂದಿನ ಯಾವ ಕಾಲದಲ್ಲಿ ಇಷ್ಟು ಹಿಂಸೆ ನಡೆದಿದೆ? ಹಾಲೊಕಾಸ್ಟ್ ಅನ್ನೊ ಟರ್ಮ್ ಬಂದಿದ್ದೇ ಯೂರೋಪಿನ ಮಧ್ಯಯುಗದ ಹಿಂಸೆಯಿಂದ. ಮನುಷ್ಯರನ್ನು ಜೀವಂತ ಸುಟ್ಟು ಕೊಲ್ತಾ ಇದ್ದರು. ಎಲ್ಲವೂ ನಾಗರಿಕ ದೇಶಗಳು. ಅದಕ್ಕೇನೇ, ವಿ ಶುಡ್ ಇಂಟರಾಗೇಟ್ ದ ವೆರಿ ಐಡಿಯಾ ಆಫ್ ನೇಶನ್ ಅಂಡ್ ನೇಶನ್ ಸ್ಟೇಟ್. ಇದನ್ನು ಮುಖಾಮುಖಿಯಾಗದೆ ಹಿಂಸೆಯನ್ನು ಅರ್ಥಪೂರ್ಣವಾಗಿ ಹೇಳೋಕೆ ಮಾತ್ರವಲ್ಲ, ಎದುರಿಸೋಕೂ ಸಾಧ್ಯವಾಗಲ್ಲ.

◆ ಪ್ರಭುತ್ವದ ಹಿಂಸೆಗೆ, ಬಹುಸಂಖ್ಯಾತರ ಅಧಿಕಾರಕ್ಕೆ, ಲೇಖಕರೂ ತತ್ವಜ್ಞಾನಿಗಳೂ ಬೆಂಬಲಿಸುವುದುಂಟು. ನೀಶೆ ನಾಜಿಗಳನ್ನು ಬೆಂಬಲಿಸಿದ್ದ. ಈ ಹಿನ್ನೆಲೆಯಲ್ಲಿ ಕಾರಂತರು ಕೊನೇ ದಿನಗಳಲ್ಲಿ ಬಲಪಂಥೀಯ ಕಾರ್ಯಕ್ರಮಗಳನ್ನು ಬೆಂಬಲಿಸಿದರು. ಇದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು?

ನಾನು ಅದರ ಬಗ್ಗೇನೆ ಯೋಚನೆ ಮಾಡ್ತಾ ಇದೀನಿ. ಕಾರಂತರಿಗೆ ಮುಂಬೈ ದ ಸಿಟಿ ವಿಚ್ ಹಿ ಲವ್ಡ್. ವರ್ಷಕ್ಕೆ ಎರಡು ತಿಂಗಳು ಅಲ್ಲೇ ಇರ್ತಾ ಇದ್ದರು. ಅವರಿಗೆ ಬಹಳ ಆಪ್ತರು ಅಲ್ಲಿದ್ದರು. ಗುಲ್ವಾಡಿಯವರು ಒಂದು ಸಲ ಹೇಳ್ತಿದ್ದರು. ಕಾರಂತರಿಗೆ ಮುಂಬೈ ರಸ್ತೆಗಳು ಎಷ್ಟು ಇಷ್ಟ ಅಂದರೆ, ಹಿ ವಿಲ್ ಲೂಸ್ ಹಿಮಸೆಲ್ಫ್ ಅಬ್ಯಾಂಡನ್ – ಗಂಗಾನದಿ ನೋಡಿ ರಾಮಕೃಷ್ಣ ಪರಮಹಂಸರು ಪರವಶರಾದ ಹಾಗೆ. ಅವರ 'ಅಳಿದ ಮೇಲೆ' ಕಾದಂಬರಿಯ ನಾಯಕ ಮುಂಬೈವಾಸಿ; 'ಮರಳಿ ಮಣ್ಣಿಗೆ'ಯ ರಾಮ ವಿಕಾಸಗೊಳ್ಳೋದು ಮುಂಬೈನಲ್ಲಿ; ಮುಂಬೈ ಕಾರಂತರಿಗೆ ಒಂದು ಸಾಧ್ಯತೆ. ಹಾಗಿರುವಾಗ 1992ರ ಮುಂಬೈನ ಗಲಭೆಗಳು ಅವರಿಗೆ ಯಾಕೆ ಅವರನ್ನ ಯಾವ ರೀತೀಲೂ